2) ವಿಶೇಷ ಘಟಕ ಯೋಜನೆ
(2402-00-800-2-02) 173.00 ಲಕ್ಷಗಳು
3) ಬಯಲುಭೂಮಿ ಅಭಿವೃದ್ಧಿ ಮಂಡಳಿ
(2400-00-800-2-01) 431.00 ಲಕ್ಷಗಳು
ಒಟ್ಟು 647.00 ಲಕ್ಷಗಳು

ಈ ಹಣವನ್ನು ಯಾವ ಯಾವ ಕೆಲಸಗಳಿಗೆ ಬಳಸಬೇಕು ಎಂಬುದನ್ನು ಮಂಡಳಿಯು ನಿರ್ಧರಿಸಬೇಕಾಗಿದೆ.

ವಿಷಯ:- ಪೋಲೀಸ್ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:81(375)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮಾಂತರ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

1) ರಾಜ್ಯ ಪೋಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದರೆ ಎಷ್ಟು ಕೊರತೆ ಇದೆ, ಯಾವ ಯಾವ ಹುದ್ದೆಗಳು ಖಾಲಿ ಇವೆ,

3) ಅವುಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಆರ್.ರೋಷನ್‌ಬೇಗ್(ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):- (1) ಹೌದು.

(2) 9763 (ಪಟ್ಟಿ ಲಗತ್ತಿಸಿದೆ.)

(3) (1) ಹಿರಿಯ ಅಧಿಕಾರಿಗಳ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದಲ್ಲಿ ಕ್ರಮ ಮುಂದುವರೆದಿದೆ

(2) ಪಿ.ಎಸ್.ಐ. ಹುದ್ದೆಗಳನ್ನು ತುಂಬಲು ನೇರ ನೇಮಕಾತಿಯಿಂದ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಮುಂದಿನ ನೇಮಕಾತಿ ಪ್ರತಿಕ್ರಿಯೆಗೆ ತಡೆ ನೀಡಿದೆ. ತಡೆಯಾಜ್ಞೆ ತೆರವಾದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

(3)ಪೋಲೀಸ್ ಪೇದೆ ಹುದ್ದೆಗಳಿಗೆ ನೇರ ನೇಮಕಾತಿ ವಿವಿಧ ಘಟಕಗಳಲ್ಲಿ ಮುಂದುವರೆದು 1994 ಜನರನ್ನು ಆಯ್ಕೆ ಮಾಡಲಾಗಿದೆ.

(4) ಕೆ.ಎಸ್.ಆರ್.ಪಿ. ಘಟಕಗಳಲ್ಲಿನ ಪೇದೆ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಆಯ್ಕೆ ಮಾಡಿರುವ ಪಟ್ಟಿಯ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದರೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಿಂದ ಮುಂದಿನ ಆದೇಶದವರೆಗೆ ನೇಮಕಾತಿ ಆದೇಶ ನೀಡಬಾರದೆಂದು ತಡೆಯಾಜ್ಞೆ ಬಂದಿದೆ. ಅದನ್ನು ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

(5) ಬಡ್ತಿಯಿಂದ ತುಂಬಬೇಕಾಗಿರುವ ಹುದ್ದೆಗಳನ್ನು ತುಂಬಲು ಪ್ರಾಧಿಕಾರವುಳ್ಳ ಅಧಿಕಾರಗಳು ಬಡ್ತಿ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ.

ದಿನಾಂಕ 1-7-1996ರಲ್ಲಿರುವಂತೆ ಖಾಲಿ ಹುದ್ದೆಗಳ ವಿವರ

ಡೈರೆಕ್ಟರ್ ಜನರಲ್ ಆಫ್ ಪೋಲೀಸ್

2.	ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್	3
3.	ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್	-
4.	ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್	5
5.	ಸೂಪರಿಂಟಿಂಡೆಂಟ್ ಆಫ್ ಪೋಲೀಸ್, ಐ.ಪಿ.ಎಸ್.	1
6.	ಸೂಪರಿಂಟಿಂಡೆಂಟ್ ಆಫ್ ಪೋಲೀಸ್,ನಾನ್ ಐ.ಪಿ.ಎಸ್.	5
7.	ಸೂಪರಿಂಟಿಂಡೆಂಟ್ ಆಫ್ ಪೋಲೀಸ್, ಆರ್ಮಡ್	-
8.	ಕಮಾಂಡೆಂಟ್, ಕೆ.ಎಸ್.ಆರ್.ಪಿ.	-
9.	ಡಿ.ವೈ.ಎಸ್.ಪಿ.(ಸಿವಿಲ್)	17
10.	ಡಿ.ವೈ.ಎಸ್.ಪಿ.(ಆರ್ಮಡ್)	-
11.	ಡಿ.ವೈ.ಎಸ್.ಪಿ. (ವೈರ್‌ಲೆಸ್)	3
12.	ಡಿ.ವೈ.ಎಸ್.ಪಿ. (ಎಫ್.ಪಿ.ಬಿ.)	-
13.	ಪೋಲೀಸ್ ಇನ್ಸ್‌ಪೆಕ್ಟರ್ , ಸಿವಿಲ್	80
14.	ಮಹಿಳಾ ಪೋಲೀಸ್ ಇನ್ಸ್‌ಪೆಕ್ಟರ್	1
15.	ಪೋಲೀಸ್ ಇನ್ಸ್‌ಪೆಕ್ಟರ್ (ಆರ್ಮಡ್)	13
16.	ಪೋಲೀಸ್ ಇನ್ಸ್‌ಪೆಕ್ಟರ್, ವೈರ್‌ಲೆಸ್	19
17.	ಪೋಲೀಸ್ ಇನ್ಸ್‌ಪೆಕ್ಟರ್, ಎಫ್.ಪಿ.ಬಿ.	1
18.	ಆಡಳಿತಾಧಿಕಾರಿ	1
19.	ಸಹಾಯಕ ಆಡಳಿತಾಧಿಕಾರಿ	-
20.	ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಸಿವಿಲ್	358
21.	ಮಹಿಳಾ ಸಬ್ ಇನ್ಸ್‌ಪೆಕ್ಟರ್	4
22.	ಸಹಾಯಕ ಸಬ್ ಇನ್ಸ್‌ಪೆಕ್ಟರ್	92
23.	ಮಹಿಳಾ ಸಹಾಯಕ ಸಬ್ ಇನ್ಸ್‌ಪೆಕ್ಟರ್	5
24.	ಮುಖ್ಯ ಪೇದೆ	224
25.	ಮಹಿಳಾ ಮುಖ್ಯ ಪೇದೆ	107
26.	ಪೋಲೀಸ್ ಪೇದೆ	3588
27.	ಮಹಿಳಾ ಪೋಲೀಸ್ ಪೇದೆ	245
28.	ವಿಶೇಷ ಆರ್.ಎಸ್.ಐ	80
29.	ಸಹಾಯಕ ಆರ್.ಎಸ್.ಐ	21
30.	ಸಶಸ್ತ್ರ ಮುಖ್ಯ ಪೇದೆ	82
31.	ಸಶಸ್ತ್ರ ಪೋಲೀಸ್ ಪೇದೆ	1413
32.	ಅಸಿಸ್ಟೆಂಟ್ ಕಮಾಂಡೆಂಟ್	7
33.	ಸ್ಪೆಷಲ್ ಆರ್.ಪಿ.ಐ.	46

34.	ಸ್ಪೆಷಲ್ ಆರ್.ಎಸ್.ಐ, ಕೆ.ಆರ್.ಎಸ್.ಪಿ	34
35.	ಎ.ಆರ್.ಎಸ.ಐ.	52
36.	ಹವಲ್ದಾರ್	260
37.	ನಾಯಕ್	66
38.	ಲ್ಯಾನ್ಸ್ ನಾಯಕ್	249
39.	ಪೋಲೀಸ್ ಪೇದೆ, ಕೆ.ಎಸ್.ಆರ್.ಪಿ	2223
40.	ಫಾಲೋಯರ್ ಜಮೇದಾರ್	1
41.	ಫಾಲೋಯರ್	769
42.	ಶಾಖಾಧೀಕ್ಷಕರು	34
43.	ಪ್ರಥಮ ದರ್ಜೆ ಸಹಾಯಕರು	22
44.	ದ್ವಿತೀಯ ದರ್ಜೆ ಸಹಾಯಕರು	10
45.	ಶೀಘ್ರಲಿಪಿಗಾರರು	33
46.	ಬೆರಳಚ್ಚುಗಾರರು	82
47.	ದಲಾಯತ್	7
	ಒಟ್ಟು	9763

ವಿಷಯ:- ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 82(393)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹೈಕೋರ್ಟು ಪೀಠವನ್ನು ಸ್ಥಾಪಿಸುವ ಕುರಿತು ಇಲ್ಲಿಯವರೆಗೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು? ಇದಕ್ಕೆ ಇರುವ ಅಡಚಣೆಗಳು ಏನು; ಈ ಅಡಚಣೆ ನಿವಾರಿಸಿ ಹೈಕೋರ್ಟು ಪೀಠವನ್ನು ಜರೂರಾಗಿ ಸ್ಥಾಪಿಸಲು ಸರ್ಕಾರ ಪ್ರಯತ್ನ ಮಾಡುವುದೇ? ಎಷ್ಟು ಅವಧಿಯಲ್ಲಿ ಈ ಪೀಠ ಸ್ಥಾಪಿತವಾಗಲು ಸಾಧ್ಯತೆ ಇದೆ?

ಶ್ರೀ ಜೆ.ಹೆಚ್.ಪಟೇಲ್(ಮುಖ್ಯ ಮಂತ್ರಿಗಳು):- (ಅ) ಪ್ರಥಮ ಬಾರಿಗೆ ಉಚ್ಚ ನ್ಯಾಯಾಲಯದ ಖಾಯಂ ಪೀಠವನ್ನು ಕೇಂದ್ರ ಸ್ಥಾನದ ಹೊರಗೆ ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದ ನಂತರ ಕೇಂದ್ರ ಸರ್ಕಾರವು ಇಂತಹ ಎಲ್ಲಾ ಮನವಿಗಳನ್ನು ಪರಿಶೀಲಿಸಲು ನೇಮಿಸಿದ ಜಸವಂತ್ ಸಿಂಗ್ ಆಯೋಗವು ಕೇಂದ್ರ ಸ್ಥಾನದಿಂದ ಹೊರಗೆ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪಿಸುವ ಬಗ್ಗೆ ಶಿಫಾರಸ್ಸು ಮಾಡಿರುತ್ತದೆ. ಸದರಿ ಆಯೋಗದ ಶಿಫಾರಸ್ಸಿನಲ್ಲಿನ ತತ್ವಗಳನ್ನು ಅಳವಡಿಸಿಕೊಳ್ಳಲು ದಿನಾಂಕ: 27- 10- 1987ರಂದು ಸಚಿವ ಸಂಪುಟವು ಅನುಮೋದಿಸಿತು. ಹಾಗೂ